**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ (ಆಸೀನ ಶ್ರೀರಂಗಪಟ್ಟಣ)**

ಎಸ್ ಸಿ ಸಂಖ್ಯೆಃ **5007/2025**

ಪಿರ್ಯಾದುದಾರರು ಪಾಂಡವಪುರ ಪೊಲೀಸ್ ಠಾಣೆ

**- ವಿರುದ್ಧ -**

ಆರೋಪಿಗಳು ಶಿವರಾಜು ಎಸ್ ಡಿ

ದೋಷಾರೋಪಣೆ

ಶ್ರೀ ಗೋಪಾಲಕೃಷ್ಣ ರೈ ಟಿ. ಬಿ.ಎ. ಎಲ್‌ಎಲ್.ಬಿ., 3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ (ಆಸೀನ ಶ್ರೀರಂಗಪಟ್ಟಣ) ರವರಾದ ನಾನು ಆರೋಪಿತರಾದ

ಶಿವರಾಜು ಎಸ್ ಡಿ
ಬಿನ್ ಲೇಟ್ ದಾಸಯ್ಯ ಉಃ ಮೂಗಯ್ಯ,
ವಯಸ್ಸುಃ 37 ವರ್ಷಗಳು,
ವಾಸಃ ಛತ್ರಪತಿ ಶಿವಾಜಿ ರೈಲ್ವೆಸ್ಟೇಷನ್ ಹತ್ತಿರ,
ಶಾಹಿದ್‌ಬಾಗ್ ಸಿಂಗ್ ರಸ್ತೆ,
ಬಲ್ಲಾಡ್ ಎಸ್ಟೇಟ್, ಮುಂಬೈ ಸಿಟಿ,
ಮಹಾರಾಷ್ಟ್ರ.
ಸ್ವಂತ ವಿಳಾಸಃ ಶಂಭೂನಹಳ್ಳಿ ಗ್ರಾಮ
ಕಸಬಾ ಹೋಬಳಿ,
ಪಾಂಡವಪುರ ತಾಲ್ಲೂಕು.

ನಿಮ್ಮ ವಿರುದ್ಧ ಈ ಕೆಳಗಿನಂತೆ ದೋಷಾರೋಪಣೆ ರಚಿಸಿರುತ್ತೇನೆ.

- - -

ಮೊದಲನೆಯದಾಗಿ ದಿನಾಂಕಃ 13.10.2024 ರಂದು ಬೆಳಿಗ್ಗೆ ಸುಮಾರು 8.00 ಗಂಟೆ ಸಮಯದಲ್ಲಿ ಪಾಂಡವಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಶಂಭೂನಹಳ್ಳಿ ಗ್ರಾಮದಲ್ಲಿ ಸಾಕ್ಷಿ-8 ನೀಲಮ್ಮ ರವರ ಮನೆಯ ಮುಂಭಾಗದ ಜಗಲಿಯ ಮೇಲೆ ಸಾಕ್ಷಿ-1 ಎಸ್ ಡಿ ಮಂಜುನಾಥ ಮತ್ತು ಸಾಕ್ಷಿ-2 ಮಂಜುನಾಥ

ಮತ್ತು ಸಾಕ್ಷಿ-3 ವಿನೋದ ರವರುಗಳು ಮಾತನಾಡುತ್ತಾ ಕುಳಿತಿದ್ದಾಗ ಆರೋಪಿಯಾದ ನೀನು ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ನಿಷೇಧಿತ ಶಸ್ತ್ರಾಸ್ತ್ರಗಳಾದ ಎರಡು ಪಿಸ್ತೂಲ್‌ಗಳನ್ನು ಹಾಗೂ ಜೀವಂತ ಗುಂಡುಗಳನ್ನು ಇಟ್ಟುಕೊಂಡು ಬಂದು ಸಾಕ್ಷಿ-2 ಮಂಜುನಾಥನನ್ನು ಉದ್ದೇಶಿಸಿ ಏನ್ಲಾ ನಿಂದು ಜಾಸ್ತಿಯಾಯ್ತು, ಬೋಳಿ ಮಗನೇ, ನೀನು ಬದುಕಿದ್ದರೆ ತಾನೆ ನನ್ನ ಹೆಂಡತಿ ಜೊತೆ ಸೇರೋದು, ನಿನಗೆ ಎಷ್ಟು ಹೇಳಿದರೂ ಬುದ್ದಿ ಬರಲ್ಲಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿರುತ್ತಿ. ಈ ಕಾರಣದಿಂದ ಆರೋಪಿಯಾದ ನೀನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್)-2023 ಕಲಂ 352 ರ ರೀತ್ಯಾ ಶಿಕ್ಷಾರ್ಹ ಅಪರಾದವೆಸಗಿರುತ್ತಿ.

2. ಎರಡನೆಯದಾಗಿ ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಆರೋಪಿಯಾದ ನೀನು ಸಾಕ್ಷಿ-2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ನಿನ್ನ ಎಡಕೈಯಲ್ಲಿ ಹಿಡಿದಿದ್ದ ಪಿಸ್ತೂಲಿನಿಂದ ಸಾಕ್ಷಿ-2 ರವರ ಕಡೆಗೆ ಫೈಯರ್ ಮಾಡಿದ್ದು, ಆ ಬುಲೆಟ್ ಸಾಕ್ಷಿ-2 ರವರಿಗೆ ಬೀಳದೇ ಇದ್ದಾಗ ನಿನ್ನ ಬಲಕೈಯಲ್ಲಿ ಹಿಡಿದಿದ್ದ ಪಿಸ್ತೂಲನ್ನು ಸಾಕ್ಷಿ-2 ತಲೆಗೆ ಗುರಿ ಮಾಡಿ ಫೈಯರ್ ಮಾಡಿ ಕೊಲೆ ಮಾಡಲು ಪ್ರಯತ್ನಿಸಿರುತ್ತಿ. ಈ ಕಾರಣದಿಂದ ಆರೋಪಿಯಾದ ನೀನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್)-2023 ಕಲಂ 109 ರ ರೀತ್ಯಾ ಶಿಕ್ಷಾರ್ಹ ಅಪರಾದವೆಸಗಿರುತ್ತಿ.

3. ಮೂರನೆಯದಾಗಿ ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಆರೋಪಿಯಾದ ನೀನು ನಿನ್ನ ಬಲಕೈಯಲ್ಲಿದ್ದ ಪಿಸ್ತೂಲ್‌ನಿಂದ ಸಾಕ್ಷಿ-2 ರವರ ತಲೆಗೆ ಗುರಿ ಮಾಡಿ ಫೈಯರ್ ಮಾಡಿದಾಗ ಅದು ಸಾಕ್ಷಿ-2 ರವರ ಎಡಭಾಗದ ಹಣೆಗೆ ಹೊಡೆದು ಎಡಭಾಗದ ಹಣೆಯ ಮೂಳೆ ಮುರಿತವಾಗಿ ತೀವ್ರ ಸ್ವರೂಪದ ಗಾಯವನ್ನು ಮತ್ತು ಸಾಕ್ಷಿ 2 ರವರ ಎಡಭಾಗದ ಹಣೆಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಿ. ಈ ಕಾರಣದಿಂದ ಆರೋಪಿಯಾದ ನೀನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ನ್ಯಾಯ

ಸಂಹಿತೆ (ಬಿಎನ್‌ಎಸ್)-2023 ಕಲಂ 118(1)(2) ರ ರೀತ್ಯಾ ಶಿಕ್ಷಾರ್ಹ ಅಪರಾದವೆಸಗಿರುತ್ತಿ.

4. ಕೊನೆಯದಾಗಿ ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಆರೋಪಿಯಾದ ನೀನು ಸಾಕ್ಷಿ 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾಕ್ಷಿ 2 ರವರನ್ನು ಉದ್ದೇಶಿಸಿ ಇವತ್ತೇ ನಿನಗೆ ಒಂದು ಗತಿ ಕಾಣಿಸುತ್ತೀನಿ ಎಂದು ಪ್ರಾಣಬೆದರಿಕೆ ಹಾಕಿರುತ್ತಿ. ಈ ಕಾರಣದಿಂದ ಆರೋಪಿಯಾದ ನೀನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್)-2023 ಕಲಂ 351(2)(3) ರ ರೀತ್ಯಾ ಶಿಕ್ಷಾರ್ಹ ಅಪರಾದವೆಸಗಿರುತ್ತಿ.

ಆರೋಪಿಯಾದ ನೀನು ಮೇಲಿನ ದೋಷಾರೋಪಣೆಯ ಬಗ್ಗೆ ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತಿದ್ದೇನೆ.

(ಗೋಪಾಲಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ (ಆಸೀನ ಶ್ರೀರಂಗಪಟ್ಟಣ).